ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ, ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಮತ್ತು ವಕ್ಫ್ ರಾಜ್ಯ ಸಚಿವರು) :—

1. 1996-99ರವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ 116 ಮಸೀದಿಗಳಿಗೆ ರೂ. 25,13,000.00 ಮಂಜೂರಾಗಿರುತ್ತದೆ. 75 ಮಸೀದಿಗಳಿಗೆ ರೂ. 9,58,000.00 ಬಿಡುಗಡೆ ಮಾಡಲಾಗಿದೆ.

2. 1996-97ರ ಅವಧಿಯಲ್ಲಿ ಪುತ್ತೂರು ತಾಲ್ಲೂಕಿನಲ್ಲಿ ಸಂಸ್ಥೆಯ ಮತಿಯಿಂದ ವಿವರಗಳು ಸ್ವೀಕೃತಿಯಾಗದೆ ಇರುವ ಕಾರಣದಿಂದ ಮಂಜೂರಾದ ರೂ. 25,000.00 ಬಿಡುಗಡೆ ಯಾಗಿರುವುದಿಲ್ಲ.

ಸಂಸ್ಥೆಯಿಂದ ವಿವರಗಳ ಪತ್ರ ಸ್ವೀಕೃತಿಯಾದ ನಂತರ ಮಂಜೂರಾಗಿರುವ ಹಣವನ್ನು ಗ್ರಾಂಟ್-ಇನ್-ಕೋಡ್ ಪ್ರಕಾರ ತುರ್ತಾಗಿ ಬಿಡುಗಡೆ ಮಾಡಲಾಗುವುದು.

ಬಾರ್‌ಗಳಿಗೆ ಪರವಾನಗಿ ನೀಡುವುದರ ಕುರಿತು.

1663(2384) ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) :— ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಈವರೆಗೆ ಎಷ್ಟು ಬಾರ್‌ಗಳಿಗೆ ಪರವಾನಗಿ ನೀಡಲಾಗಿದೆ. ಈವರ್ಷ ಹೊಸ ಬಾರ್‌ಗಳಿಗೆ ಪರವಾನಗಿ ನೀಡುವ ಉದ್ದೇಶ ಸರ್ಕಾರದವರಿಗಿದೆಯೇ?

ಆ) ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿರುವ ಬಾರ್‌ಗಳ ಲೈಸನ್ಸ್ ರದ್ದುಪಡಿಸುವ ಉದ್ದೇಶ ಸರ್ಕಾರದ ಮುಂದಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಜಯವಂತ ಸುಬ್ರಾಯ (ಅಬಕಾರಿ ರಾಜ್ಯ ಸಚಿವರು) :—

ಅ) 1998-99ನೇ ಸಾಲಿನಲ್ಲಿ (ಮೇ 99ರ ಅಂತ್ಯಕ್ಕೆ) ರಾಜ್ಯದಲ್ಲಿ ಒಟ್ಟು 3430 ಬಾರ್‌ಗಳಿಗೆ ಸನ್ನದು ನೀಡಲಾಗಿದೆ. ಹೊಸ ಬಾರ್‌ಗಳಿಗೆ ಪರವಾನಗಿ ನೀಡುವ ಅವಶ್ಯಕತೆ ಇದೆಯೇ ಎಂಬ ಅಂಶವನ್ನು ತಿಳಿದುಕೊಳ್ಳಲು ಸಮೀಕ್ಷೆಯೊಂದನ್ನು ನಡೆಸಲಾಗುತ್ತಿದೆ. ಈ ಸಮೀಕ್ಷೆಯ ಆಧಾರದ ಮೇಲೆ ಹೊಸದಾಗಿ ಬಾರ್ ಸನ್ನದುಗಳನ್ನು ನೀಡಬೇಕೇ ಅಥವಾ ಬೇಡವೇ ಎಂಬ ಬಗ್ಗೆ ನಿರ್ಧಾರವನ್ನು ಕೈಗೊಳ್ಳಲಾಗುವುದು.

ಆ) ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಯ 220 ಮೀಟರ್ ಅಂತರದಲ್ಲಿ ಮದ್ಯದ ಅಂಗಡಿಗಳನ್ನು ತೆರೆಯಲು ಅವಕಾಶ ಇರುವುದಿಲ್ಲ. ಆದರೆ 1-7-92 ರಂದು ಅಸ್ತಿತ್ವದಲ್ಲಿದ್ದ ಸನ್ನದುಗಳನ್ನು ಇಂತಹ ಹೆದ್ದಾರಿಗಳ ಪಕ್ಕದಲ್ಲಿ ಇದ್ದಲ್ಲಿ, ಮತ್ತು ಆ ಸ್ಥಳಗಳ ಜನಸಂಖ್ಯೆ

2,500 ಕ್ಕಿಂತಲೂ ಹೆಚ್ಚಿದ್ದಲ್ಲಿ ಅಂತಹ ಸನ್ನದುಗಳನ್ನು ಮುಂದುವರೆಸಿಕೊಂಡು ಹೋಗಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ಆದ್ದರಿಂದ ಇಂತಹ ಅಂಗಡಿಗಳನ್ನು ರದ್ದುಪಡಿಸುವ ಉದ್ದೇಶ ಸರ್ಕಾರಕ್ಕೆ ಇಲ್ಲ.

ಇ) ಉದ್ಭವಿಸುವುದಿಲ್ಲ.

ಸಾರಾಯಿ ಗುತ್ತಿಗೆ ಮತ್ತು ಮಾರಾಟದ ವ್ಯವಸ್ಥೆ.

1664(2385) ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) :— ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸರ್ಕಾರದ ಈಗಿರುವ ಸಾರಾಯಿ ಗುತ್ತಿಗೆ ಮತ್ತು ಮಾರಾಟದ ವ್ಯವಸ್ಥೆಯನ್ನು ಬದಲಾಯಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಇದ್ದರೆ ಆ ವ್ಯವಸ್ಥೆಯ ರೂಪುರೇಷೆಗಳೇನು?

ಇ) ಅನಧಿಕೃತ ಸಾರಾಯಿ ಅಂಗಡಿಗಳನ್ನು ಮುಚ್ಚಿಸುವ ಕಾರ್ಯದಲ್ಲಿ ಕಳೆದ ಒಂದು ವರ್ಷದಲ್ಲಿ ಆಗಿರುವ ಪ್ರಗತಿ ಎಷ್ಟು?

ಶ್ರೀ ಜಯವಂತ ಸುಬ್ರಾಯ (ಅಬಕಾರಿ ರಾಜ್ಯ ಸಚಿವರು) :—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) 1998-99ನೇ ಸಾಲಿನಲ್ಲಿ ರಾಜ್ಯದಲ್ಲಿ ಒಟ್ಟಾರೆ 566 ಅನಧಿಕೃತ ಸಾರಾಯಿ ಅಂಗಡಿಗಳು ಕಂಡು ಬಂದಿದ್ದು, ಅವುಗಳನ್ನು ಮುಚ್ಚಿಸಲಾಗಿರುತ್ತದೆ.

ರಾಜ್ಯದ ಸಚಿವರುಗಳು ಪಡೆದುಕೊಂಡಿರುವ ಪ್ರವಾಸಭತ್ಯೆಗಳು.

1665(2362) ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(1) 1998-99ನೇ ಸಾಲಿನಲ್ಲಿ ರಾಜ್ಯದ ಸಚಿವರುಗಳು ಪಡೆದುಕೊಂಡಿರುವ ಪ್ರವಾಸಭತ್ಯೆದ ಒಟ್ಟು ಮೊಬಲಗೆಷ್ಟು? (ಪ್ರತ್ಯೇಕ ವಿವರ ನೀಡುವುದು)

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :—

(1) ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.